CC-O. In Public Domain. Digitized by eGangotri

ಹುಡುಗು ಸಹವಾಸ

ಕೈವಾರ ರಾಜಾರಾವ್

ಪ್ರಕಾಶಕರು

ಡಿ. ವಿ. ಕೆ. ಮೂರ್ತಿ

ಕೃಷ್ಣಮೂರ್ತಿಪುರಂ : : ಮೈಸೂರು ೪

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಹುಡುಗು ಸಹವಾಸ

ನಾಟಕ

ಕೈವಾರ ರಾಜಾರಾವ್

ಪ್ರಕಾಶಕರು

ಡಿ. ವಿ. ಕೆ. ಮೂರ್ತಿ

ಕೃಷ್ಣಮೂರ್ತಿಪುರಂ : : ಮೈಸೂರು ೪

Sri Vidyabharathi Book Centre, Sringeri

CC-0. In Public Domain. Digitized by eGangotri

ಶ್ರೀ ನಾಟಕಕಲಾ ಪ್ರಕಾಶನ ಪುಸ್ತಕ : ೧೫೬೨

© ಕೈವಾರ ರಾಜಾರಾವ್

ಸೂಚನೆ

ಈ ನಾಟಕವನ್ನು ಅಭಿನಯಿಸುವವರು ಲೇಖಕರ ವಿಳಾಸಕ್ಕೆ 15 ರೂ ಗೌರವಧನ ಕಳುಹಿಸಿ ಲಿಖಿತ ಅನುಮತಿ ಪಡೆಯಬೇಕು.

ವಿಳಾಸ
ಕೈವಾರ ರಾಜಾರಾವ್
276, 5ನೇ ಮುಖ್ಯ ರಸ್ತೆ, ನರಸಿಂಹರಾಜ ಕಾಲೊನಿ
ಬೆಂಗಳೂರು 560 019

ಬೆಲೆ : ರೂ 1.50

ಮುದ್ರಕರು
ಶ್ರೀ ಗುರು ಪ್ರಿಂಟರ್ಸ್, ಸೀತಾರಾಮರಾವ್ ರಸ್ತೆ
ಮೈಸೂರು ೪

Sri Vidyabharathi Book Centre, Sringeri

CC-O. In Public Domain. Digitized by eGangotri

ಹುಡುಗು ಸಹವಾಸ

Sri Vidyabharathi Book Centre, Sringeri

CC-O. In Public Domain. Digitized by eGangotri

ಪಾತ್ರಗಳು

೧. ಮಾಧು : ೨೨ ವರ್ಷದ ಸುಂದರ ಯುವಕ.

೨. ಉಮಾ : ೧೮ ವರ್ಷದ ಯುವತಿ—ಅವನ ಪ್ರೇಯಸಿ.

೩. ಮನೆಯ ಯಜಮಾನಿ

೪. ಪೋಸ್ಟ್‌ಮ್ಯಾನ್

Sri Vidyabharathi Book Centre, Sringeri

CC-O. In Public Domain. Digitized by eGangotri

[ತೆರೆ ಮೇಲೇಳುವ ಕಾಲಕ್ಕೆ ಒಂದು ಕೊಠಡಿಯ ದೃಶ್ಯ ಕಾಣುತ್ತದೆ. ಒಂದು ಗೋಡೆಯ ಕಡೆ ಹಾಸಿಗೆ ಸುರುಳಿಯೊಂದಿದೆ. ಉಮಾ ಆದರ ಮೇಲೆ ಕುಳಿತು ಅಳುತ್ತಿದ್ದಾಳೆ. ಅವಳ ಕಣ್ಣಿನಿಂದ ಧಾರೆಧಾರೆಯಾಗಿ ನೀರು ಹರಿಯುತ್ತಿದೆ. ಅವಳುಟ್ಟಿರುವುದು ಮಾಸಿದ ಬಟ್ಟೆಯಾದರೂ ಮುಖದಲ್ಲಿ ಸಿರಿವಂತರ ವರ್ಚಸ್ಸಿದೆ. ಒಂದು ಕಡೆಯಿಂದ ಇನ್ನೊಂದು ಕಡೆಗೆ ಕಟ್ಟಿರುವ ಕೋಲಿನ ಮೇಲೆ ಮಾಸಿದ (ಆದರೂ ಬೆಲೆ ಬಾಳುವ) ಸೀರೆ ಕುಪ್ಪುಸಗಳೂ ಒಂದೆರಡು ಪಂಚೆ ಕೋಟುಗಳೂ ಮಡಿಸಿಹಾಕಿವೆ. ಅವಷ್ಟನ್ನು ಬಿಟ್ಟರೆ ಒಂದು ಗೋಡೆಗೆ ವಿಷ್ಣು ಲಕ್ಷ್ಮಿ ಸರಸ್ವತಿಯ ಫೋಟೋಗಳನ್ನು ಒಟ್ಟಿಗೆ ಸೇರಿಸಿ ಕಟ್ಟುಹಾಕಿರುವ ಪಟ, ಇನ್ನೊಂದು ಗೋಡೆಗೆ ಗಾಂಧೀಜಿಯವರ ಪಟ—ಇವಿಷ್ಟು ಮಾತ್ರ ಕಾಣುತ್ತಿವೆ. ಒಟ್ಟಿನಲ್ಲಿ ಭಾಗ್ಯವಂತರ ಪುಕ್ಕಳು ಬಡವರ ಕೋಣೆಯಲ್ಲಿರುವ ಹಾಗೆ ಭಾಸವಾಗುತ್ತಿದೆ. ಕ್ಷಣ ಹೊತ್ತಿನ ಮೇಲೆ ಮನೆಯ ಯಜಮಾನಿ ಪ್ರವೇಶಿಸುವಳು. ಅವಳು ಸರದಾರ ಹೆಂಗಸು; ಮಾತು ಕಟು, ಧ್ವನಿ ಗದುಸು.]

ಮನೆಯ ಯಜಮಾನಿ—ಉಮಾ! ಉಮಾ!

ಉಮಾ—(ಬೆಚ್ಚಿ ಬಿದ್ದು) ಆ! ಬನ್ನಿ (ಕಣ್ಣೀರೊರೆಸಿಕೊಳ್ಳುವಳು.)

ಮನೆಯ ಯಜಮಾನಿ—ಬರೋದೇನು ಬಂತು. ಈಗ ಬಾಡಿಗೆ ಕೊಡುತ್ತೀನೆ ಅಂತ ಹೇಳಿದ್ದಿರಲ್ಲ, ಎಲ್ಲಿ.

ಉಮಾ—ಮಾಧು ಹೊರಗೆ ಹೋಗಿದ್ದಾನೆ, ಬರಲಿ. ಕೊಡುತ್ತೀನೆ.

ಮನೆಯ ಯಜಮಾನಿ—(ಅಣಕಿಸುತ್ತಾ) ಮಾಧು ಹೊರಗೆ ಹೋಗಿದ್ದಾನೆ, ಒಳಕ್ಕೆ ಬರುತ್ತಾನೆ. ಮೂರು ತಿಂಗಳಿಂದ ನಿಮ್ಮ ಸಬೂಬು ಕೇಳೀ ಕೇಳೀ ಸಾಕಾಗಿಬಿಟ್ಟಿದೆ. ಅಡ್ವಾನ್ಸು ಕೂಡ ಕೊಟ್ಟಿಲ್ಲ, ಮೂರು ತಿಂಗಳ ಬಾಡಿಗೆ ಬೇರೆ ಬಾಕಿ....

ಉಮಾ—ಈ ದಿನವೇಕೆ ಹೀಗೆ ಮಾಡುತ್ತಿದ್ದೀರಿ. ಕಾಲ ಹೀಗೇ ಇರೋಲ್ಲ. ಸ್ವಲ್ಪ ತಡೆಯಿರಿ.

ಮನೆಯ ಯಜಮಾನಿ—ತಡೆಯೋಷ್ಟು ತಡೆದದ್ದಾಗಿದೆ. ಇನ್ನು ನನ್ನಿಂದ ತಡೆಯುವುದಕ್ಕಾಗುವುದಿಲ್ಲ. ಮೊದಲು ಬಾಡಿಗೆ ಕೊಡಿ. ಅಷ್ಟೇ ಅಲ್ಲ, ಕೊಡೋ ಬಾಡಿಗೆ ಕೊಟ್ಟು ಗಂಭೀರವಾಗಿ ಮೊದಲು ಮನೆ ಬಿಟ್ಟು ಹೊರಟು ಹೋಗಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಉಮಾ—ನಾವೇನೂ ಬಾಡಿಗೆ ಕೊಡುವ ಯೋಗ್ಯತೆ ಇಲ್ಲದವರಲ್ಲ. ನಮಗೂ ಮನೆ ಇದೆ. ನಾವೂ ಬಾಡಿಗೆಗೆ ಕೊಟ್ಟಿದ್ದೀವೆ. ಆದರೆ ಏನೋ ಅಸಂದರ್ಭ ಒದಗಿ ಹೀಗಿದ್ದೀವೆ, ಅಷ್ಟೆ. ಕೋಪ ಮಾಡಿಕೊಳ್ಳಬೇಡಿ. ಸ್ವಲ್ಪ ಸುದಾರಿಸಿ.

ಮನೆಯ ಯಜಮಾನಿ—ಸುದಾರಿಸೋದೇನು ಬಂತು. ನಿಮ್ಮ ಸಹವಾಸ ನಮಗೆ ಬೇಡ ಅಂತ ಹೋದ ತಿಂಗಳೇ ಹೇಳಲಿಲ್ಲವೇನು. ನಿಮಗೆ ಮನೆ ಇದೆಯೋ ಮಠವಿದೆಯೋ ನನಗದೆಲ್ಲಾ ಬೇಡ. ಈ ದಿನ ಬಾಡಿಗೆ ಕೊಟ್ಟು ಬಿಟ್ಟು ಮನೆ ಖಾಲಿ ಮಾಡಿಬಿಡಿ.

ಉಮಾ—ಬಾಡಿಗೆ ಕೊಡುತ್ತೇನೆ. ಆದರೆ ಮನೆ ಏಕೆ ಖಾಲಿ ಮಾಡುಅನ್ನುತ್ತೀರಿ?

ಮನೆಯ ಯಜಮಾನಿ—ಅದೆಲ್ಲಾ ಚರ್ಚೆ ಮಾಡಬೇಡ. ನನಗೆಲ್ಲಾ ಗೊತ್ತಿದೆ.

ಉಮಾ—ಏನು ಗೊತ್ತಿದೆ?

ಮನೆಯ ಯಜಮಾನಿ—ನನ್ನ ಬಾಯಲ್ಲೇ ಅನಿಸಬೇಕು ಅಂತಿದ್ದೀಯೇನು?

ಉಮಾ—ಏನು ಹೇಳಿ?

ಮನೆಯ ಯಜಮಾನಿ—ಹೇಳಬೇಕೆ? ಕೇಳು ಹಾಗಾದರೆ. ನೀನು ಸಂಸಾರ ಮಾಡುತ್ತಿದ್ದೀಯಲ್ಲಾ ಈ ಮಾಧು ಎಂಬುವನ ಜೊತೆಗೆ....

ಉಮಾ—(ನಡುವೆ ಬಾಯಿಹಾಕಿ) ಸಂಸಾರ ಅಲ್ಲ.

ಮನೆಯ ಯಜಮಾನಿ—ನನ್ನನ್ನು ರೇಗಿಸಬೇಡ, ಸಂಸಾರವಲ್ಲದಿದ್ದರೆ ಇನ್ನೇನು? ನಾನು ಹೇಳೋತನಕ ಕೇಳು. ಮೂರು ತಿಂಗಳಿಂದ ನನ್ನ ಮನೇಲೆ ವಾಸಮಾಡುತ್ತಿದ್ದೀಯಲ್ಲಾ ಈ ಮಾಧು ಅನ್ನೋನ ಜೊತೇಗೆ, ಈ ಮಾಧು ನಿನ್ನ ಗಂಡ ಅಲ್ಲ. ನಿನ್ನನ್ನು ಮದುವೆಯಾಗಿಲ್ಲ....

ಉಮಾ—(ನಡುವೆ ಮಾತಾಡಲೆತ್ನಿಸಿ) ಮದುವೆ ... (ಎಂದು ಏನೋ ಹೇಳುವುದರಲ್ಲಿರಲು ಮನೆಯ ಯಜಮಾನಿ ಅವಳ ಮಾತು ಮುಂದುವರಿಸಲು ಬಿಡದೆ)

ಮನೆಯ ಯಜಮಾನಿ—ಅವನು ಕಾಲೇಜಿನಲ್ಲಿ ಓದುತ್ತಿದ್ದಾಗ ಅವನನ್ನು ಮರುಳು ಮಾಡಿ ಮನೆ ಬಿಡಿಸಿ ತಂದುಬಿಟ್ಟಿ. ನಿನ್ನಿಂದ ಅವನಿಗೆ ಪರೀಕ್ಷೆ ಪಾಸಾಗಲಿಲ್ಲ. ಅವರ ತಂದೆ ಮನೆ ಬಿಟ್ಟು ಓಡಿಸಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ದಾರಿ ತಪ್ಪಿದಿ ಅಂತ ನಿಮ್ಮ ಅಪ್ಪ ಅಮ್ಮ ನಿನ್ನನ್ನು ಮನೆಬಿಟ್ಟು ಓಡಿಸಿದರು. ಈಗ ಇಬ್ಬರೂ ಅನ್ನಕ್ಕೆ ಗತಿಯಿಲ್ಲದೆ ಅಲೀತಾ ಇದ್ದೀರಿ. ಹೌದೋ ಅಲ್ಲವೋ ಹೇಳು.

ಉಮಾ—ನಿಮ್ಮ ಮಾತು ಕೆಲವು ನಿಜವಾದರೂ ನೀವು ಹೇಳೋ ರೀತಿ ಸರಿಯಲ್ಲ.

ಮನೆಯ ಯಜಮಾನಿ—ಹಾಗಾದರೆ ಎಲ್ಲಿ ಹೇಳು ಮತ್ತೆ. ನಿಮನಿನಿಗೆ ಮದುವೆಯಾಗಿದೆಯೇನೆ?

ಉಮಾ—ಇಲ್ಲ. ಆದರೆ ಮದುವೆಯಾಗುತ್ತೇವೆ.

ಮನೆಯ ಯಜಮಾನಿ—ಮದುವೆಯಾಗದೆ ಇಬ್ಬರೇ ಸಂಸಾರ ಮಾಡುತ್ತಾರೇನೇ ಎಲ್ಲಾದರೂ.

ಉಮಾ—ನೀವು ಹೇಳುವ ಅರ್ಥದಲ್ಲಿ ನಾವು ಸಂಸಾರ ಮಾಡುತ್ತಾ ಇಲ್ಲ. ಇಬ್ಬರೂ ಒಟ್ಟಿಗೆ ವಾಸಿಸುತ್ತಿದ್ದೇವೆ, ಅಷ್ಟೆ.

ಮನೆಯ ಯಜಮಾನಿ—ಅದಕ್ಕೆ ಬೇರೆ ಅರ್ಥವಿದೆಯೇನೆ?

ಉಮಾ—ಇದೆ. ನಾವು ಒಬ್ಬರನ್ನೊಬ್ಬರು ಪ್ರೀತಿಸುತ್ತಿರುವುದು ನಿಜ. ಆದರೆ ಗಂಡಹೆಂಡಿರಂತೆ ಜೀವಿಸುತ್ತಿಲ್ಲ. ಸ್ನೇಹಿತರಂತೆ ಜೀವಿಸುತ್ತಿದ್ದೇವೆ.

ಮನೆಯ ಯಜಮಾನಿ—ಅದೇನು ಸ್ನೇಹವೋ ಅದೇನು ಪ್ರೀತಿಯೋ, ನನಗೆ ಅರ್ಥವಾಗೋಲ್ಲ. ಅದೆಲ್ಲಾರಾ ಹಾಳಾಗಿ ಹೋಗಲಿ. ನೀವೀಮನೆಗೆ ಬರುವಾಗ ನಿಮ್ಮ ನಿಮ್ಮ ಸಂಬಂಧ ಹೀಗೆ ಅಂತ ನನಗೆ ಗೊತ್ತಾಗಿದ್ರೆ ಈ ಮನೇಲಿ ಕಾಲಿಡಗೊಡಿಸುತ್ತಿದ್ದಿಲ್ಲ.

ಉಮಾ—ಏಕೆ? ಚಿಕ್ಕಪುಟ್ಟ ಪ್ರಣಯಿಗಳನ್ನು ಕಂಡರೆ ನಿಮಗೆ ಆಗದೆ?

ಮನೆಯ ಯಜಮಾನಿ—ಆಗುತ್ತೆ. ಆದರೆ, ಮದುವೆಯಾಗದೆ, ಮನೆಬಿಟ್ಟು, ಬೀದಿಯಲ್ಲಿ ಹೋಗುವವರ ಬಾಯಿಗೆ ಬಿದ್ದು, ಭಂಡ ಬಾಳು ನಡೆಸುವ ನಿಮ್ಮಂಥವರನ್ನು ಕಂಡರೆ ಆಗುವುದಿಲ್ಲ, ಅಷ್ಟೆ. ಈ ಬೀದಿಯಲ್ಲೆಲ್ಲಾ ಊರಲ್ಲೆಲ್ಲಾ ನಿನ್ನ ಮಾತೇ ಆಗಿ ಬಿಟ್ಟಿದೆ. ನನ್ನಂಥವಳಾಗಿವ್ವರೆ ಅವರಾಡುವ ಮಾತಿಗೆ ಎಂದೋ ಬಾವಿಯೋ ಕೆರೆಯೋ ನೋಡಿಕೊಳ್ಳುತ್ತಿದ್ದೆ. ಇಂಥಾ ಸಂಸಾರ ತಂದಿಟ್ಟಿದ್ದಿ ಅಂತ ನನ್ನನು

CC-O. In Public Domain. Digitized by eGangotri

ಎಲ್ಲರೂ ಅನ್ನುತ್ತಿದ್ದಾರೆ. ನಿನ್ನನ್ನು ನೋಡಿ, 'ಮರ್ಯಾದಸ್ತರ ಮನೆ ಹೆಣ್ಣು ಮಕ್ಕಳೂ ನಿನ್ನದಾರಿ ಹಿಡಿದು ಹಾಳಾದಾರು. ಮೊದಲು ಅವರನ್ನು ಓಡಿಸಿ'—ಎಂದು ಗಲಾಟೆ ಮಾಡುತ್ತಿದ್ದಾರೆ.

ಉಮಾ—(ಅಳುತ್ತಾ) ನಮ್ಮಂಥ ಪ್ರಣಯಿಗಳ ಸ್ಥಿತಿಯನ್ನು ಕಂಡರೆ ನಿಮಗೆ ಮರುಕವಾಗುವುದಿಲ್ಲವೆ?

ಮುನಿಯ ಯುಜಮಾನ—ಮರುಕವೆಂತಹುದು? ಬಾಳಿದರೆ ನಾಲ್ಕು ಜನ ಮೆಚ್ಚುವಂತೆ ಬಾಳಬೇಕು. ನಾಲ್ಕು ಜನರ ಬಾಯಿಗೆ ಬಿದ್ದು ಬದುಕುವ ಭಂಡಬಾಳು ಬಾಳಿದರೇನು, ಸತ್ತರೇನು. ಆರೆಪೊಟ್ಟೆಯುಂಡು, ಸಾಲಗಾರರೆ ಮಕ್ಕಳಾಗಿ ಹಡೆದ ತಂದೆ ತಾಯಿಗಳ ಮನಸ್ಸು ನೋಯಿಸಿ, ಬೀದಿಯವರ ಬಾಯಿಗೆ ಬಿದ್ದು ಬದುಕುವುದಕ್ಕಿಂತ ಸಾಯುವುದು ಮೇಲು. ಹೂ. ಇನ್ನೆಲ್ಲಾರಾ ಹೋಗಿ ಸಂಸಾರ ಮಾಡಿಕೊಂಡಿರಿ ಬೇಕಾದರೆ. ಈ ದಿನ ನನ್ನ ಮನೆ ಬಿಟ್ಟುಬಿಡಿ. ಬೇರೆ ಸಬೂಬು ಹೇಳಬೇಡಿ. (ಹೋಗುವಳು).

[ಪುನಃ ಹಾಸಿಗೆ ಸುರುಳಿಯ ಮೇಲೆ ಕುಳಿತು ಉಮಾ ಬಿಕ್ಕಿ ಬಿಕ್ಕಿ ಅಳುವಳು. ಸ್ವಲ್ಪ ಹೊತ್ತಿನ ಮೇಲೆ ಮಾಧು ಬರುವನು. ಆವನ ಬಟ್ಟೆಗಳೂ ಮಾಸಲೇ, ಮುಖ ನಿರಾಶೆಯಿಂದ ಬಾಡಿದೆ.]

ಉಮಾ—(ಗಟ್ಟಿಯಾಗಿ) ಮಾಧು! (ಎಂದು ಓಡಿಬಂದು ಆವನ ಎದೆಯ ಮೇಲೆ ತಲೆಯಿಟ್ಟು ಬಿಕ್ಕಿ ಬಿಕ್ಕಿ ಅಳುವಳು. ಆವನು ಆವಳ ಮುಂಗುರುಳನ್ನು ನೇವರಿಸುತ್ತಾ ಸಮಾಧಾನ ಮಾಡುವಂತೆ ಬೆನ್ನ ಮೇಲೆ ಕೈ ಆಡಿಸುವನು. ಅವನಿಗೂ ದುಃಖ ಉಕ್ಕಿಬಂದು ಅವನ ಕಣ್ಣಿನಿಂದಲೂ ಕೆಲವು ತೊಟ್ಟು ನೀರು ಸುರಿಯುವುದು. ಆದು ಉಮೆಯ ನೆತ್ತಿಯ ಮೇಲೆ ಬೀಳಲು ಆವಳು ಗದ್ಗದಕಂತದಿಂದ) ಮಾಧು! ನೀನೂ ಅಳುತ್ತೀಯಾ? ನಾನು ಗಂಡಸಿನ ಕಣ್ಣಲ್ಲಿ ನೀರನ್ನು ಕಂಡದು ಇದೇ ಮೊದಲು. (ಅವನು ಮೌನವಾಗಿರಲು) ಮಾಧು! ಮಾಧು!

ಮಾಧು—ಹೌದು, ಉಮಾ ಅಳುತ್ತೇನೆ. ಕಣ್ಣಿಂದ ನೀರು ಉದಿರುತ್ತಿದೆ. ನಾನು ಈ ಪ್ರಪಂಚಕ್ಕೆ ಬೇಡವಾಗಿದ್ದೇನೆ. ಈ ಲೋಕವನ್ನು ಬಿಟ್ಟು ಹೊರಟುಹೋಗುತ್ತೇನೆ. ಇಗೋ ಈ ಪೊಟ್ಟಣವನ್ನು ತೆಗೆದುಕೋ. ಒಂದು ಲೋಟ ನೀರು ತಾ. ಇದರಲ್ಲಿರುವ ಪುಡಿ ತೆಗೆದುಕೊಂಡು

Sri Vidyabharathi Book Centre, Sringeri

CC-O. In Public Domain. Digitized by eGangotri

ಲೋಟದಲ್ಲಿ ಕರಗಿಸಿ ಕುಡಿದುಬಿಟ್ಟರೆ, ಒಂದು ಘಳಿಗೆಯಲ್ಲಿ ಈ ಹಾಳು ಪ್ರಪಂಚದಿಂದ ಯಾರನ್ನಾದರೂ ದೂರಮಾಡಿ ಬಿಡುತ್ತದೆ ಅದು.

ಉಮಾ—ನೀನೊಬ್ಬನೇ ಹಾಗೆ ದೂರವಾಗುವುದೆ? ಮಾಧು! ನೀನು ಹೋದ ಮೇಲೆ ನಾನು ತಾನೇ ಬದುಕಿರುವೆನೆಂದುಕೊಂಡಿರುವೆಯೇನು? ಇಲ್ಲಿ ತಾ. ಅದನ್ನು ಇಬ್ಬರೂ ಒಟ್ಟಿಗೆ ಕುಡಿದು ಬಿಡೋಣ.

ಮಾಧು—ಇಬ್ಬರೂ—ಇಬ್ಬರೂ ಬೇಡ, ಉಮಾ. ನೀನು ಸಾಯುವುದು ನನಗಿಷ್ಟವಿಲ್ಲ.

ಉಮಾ—ನೀನು ಸಾಯುವುದು ನನಗಿಷ್ಟವಿದೆಯೆ?

ಮಾಧು—ಹಾಗಲ್ಲ....

ಉಮಾ—ಹಾಗಲ್ಲ, ಹೀಗಲ್ಲ. ಅದೆಲ್ಲಾ ಸರಿಯಲ್ಲ ಮಾಧು. ಬದುಕಿದ್ದರೆ ಇಬ್ಬರೂ ಬದುಕಿರಬೇಕು; ಸತ್ತರೆ ಇಬ್ಬರೂ ಸಾಯಬೇಕು.

ಮಾಧು—ಆದರೆ....

ಉಮಾ—(ಅವನ ಮಾತು ಮುಂದುವರಿಸಲು ಬಿಡದೆ) ನೋಡು ಮಾಧು, ನೀನು ಬರುವುದಕ್ಕೆ ಮುಂಚೆ ನಾನೂ ಅದೇ ನಿರ್ಧರಮಾಡಿಕೊಂಡಿದ್ದೆ. ಈಗ ಮನೆಯ ಯಜಮಾನಿ ಬಂದು ಹೀನಾಮಾನವಾಗಿ ಆಂದು ಹೋದಳು. ಒಂದು ವಿಧದಲ್ಲಿ ಅವಳ ಮಾತೂ ಸರಿಯೇ. ಈ ಹಳೆಯ ಪದ್ಧತಿಯ ಪ್ರಪಂಚದಲ್ಲಿ ನಮಗೆ, ಆಧುನಿಕ ಪ್ರಣಯಿಗಳಿಗೆ, ಸ್ಥಾನವಿಲ್ಲ. ಅವರ ಮಧ್ಯೆ ನಾವು ಬದುಕುವುದು ಸಾಧ್ಯವಿಲ್ಲ. ನೀನು ನಿನ್ನ ಕೆಲಸದಲ್ಲಿ ಸೋತು ಬಂದುದೇ ಆದರೆ ನಿನಗೇ ತಿಳಿಸದೆಯೇ ನಾನು ಪ್ರಾಣವನ್ನು ಕಳೆದುಕೊಳ್ಳಬೇಕೆಂದು ನಿರ್ಧರಮಾಡಿಕೊಂಡಿದ್ದೆ.

ಮಾಧು—ಏನು ಹುಚ್ಚು ಮಾತು ಉಮಾ! ನೀನು ಹೋದ ಮೇಲೆ ನಾನು ಬದುಕಿರುವೆನೆಂದು ನಿನ್ನ ನಂಬಿಕೆಯೇ?

ಉಮಾ—ಒಂದು ದೃಷ್ಟಿಯಿಂದ ನಾನು ನಿನಗೆ ಕೆಡಕನ್ನುಂಟುಮಾಡಿದೆನೆಂದೇ ಹೇಳಬಹುದು. ನನ್ನ ಮೇಲಿನ ಪ್ರೀತಿ ನಿನ್ನನ್ನು—ಶ್ರೀಮಂತಿಕೆಯ ಸುಖವಾಸದಲ್ಲಿದ್ದ ನಿನ್ನನ್ನು—ಮನೆ ಬಿಟ್ಟು ಹೊರಡುವಂತೆ ಮಾಡಿತು. ವಿದ್ಯಾಭ್ಯಾಸ ಮುಂದುವರಿಯದಂತೆ ಮಾಡಿತು. ಜೀವನ ಕಹಿಯಾಯಿತು. ಪ್ರಾಣವನ್ನೇ ತ್ಯಜಿಸಬೇಕೆನ್ನುವ ಹಾಗೆ ಮಾಡಿದೆ...

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಧು—ನೀನು ಹೇಳುವ ಮಾತು ನನಗೆ ಆಶ್ಚರ್ಯವನ್ನುಂಟುಮಾಡುತ್ತಿದೆ, ಉಮಾ! ನಾನೆಷ್ಟು ನಿನ್ನನ್ನು ಪ್ರೀತಿಸುತ್ತಿರುವೆನೋ ಅದಕ್ಕಿಂತ ಹೆಚ್ಚಾಗಿಯೇ ಇದೆ ನಿನ್ನ ಪ್ರೀತಿ. ಹೆಂಗಸಾದವಳು ಜನರ ಆಡಿಕೆಯನ್ನು ಆಲಕ್ಷಿಸಿ ನನ್ನೊಡನೆ ನೀನು ಬಂದುಬಿಡಲಿಲ್ಲವೆ. ನಾನೆಷ್ಟು ಕಷ್ಟಪಟ್ಟಿನೋ ನೀನೂ ಹಾಗೇ ನನ್ನೊಡನೆ ಕಷ್ಟವನ್ನು ಪಡುತ್ತಿಲ್ಲವೆ? ನಿನ್ನ ಗುಣಕ್ಕೆ ಹತ್ತು ಮಾಧುಗಳನ್ನು ತೂಗಿದರೂ ಸರಿ ತೂಗುವುದಿಲ್ಲ. ಹೆಣ್ಣುಗಳಲ್ಲಿ ನೀನೊಂದು ರತ್ನ. ಆದರೆ ಅದನ್ನು ತಕ್ಕ ಗೌರವದಿಂದ, ಸುಖದಿಂದ ಕಾಪಾಡುವ ಯೋಗ್ಯತೆ ಮಾತ್ರ ನನ್ನಲ್ಲಿಲ್ಲ. ನಾನು ನನಗೆ ಒದಗಿರುವ ಅವಮಾನ ಸಂಕಟಗಳಿಂದ ಮುಕ್ತನಾದರೆ, ಈ ಹಾಳು ಪ್ರಪಂಚದಿಂದ ಮರೆಯಾದರೆ, ನೀನು ನಿನ್ನ ಮನೆ ಸೇರಿ ಸುಖವಾಗಿರಬಹುದು....

ಉಮಾ—ನಿನ್ನ ಮಾತು ಕೇಳಿ ನನಗೆ ನಗು ಬರುತ್ತದೆ. ಮನೆಯಿಂದ ಹೊರಬಿದ್ದು, ನಾಲ್ಕಾರು ತಿಂಗಳುಗಳು ನಿನ್ನೊಡನೆ ವಾಸಿಸಿದ ಮೇಲೆ, ನಿನ್ನನ್ನು ಬಿಟ್ಟು ನನಗೆ ಗತಿಯುಂಟೆ ಮಾಧು. ಹೆತ್ತ ಮನೆಗೂ ನಾನು ದೂರವಾದೆ. ನನ್ನ ಪರಿಶುದ್ಧತೆ ಆವರ ದೃಷ್ಟಿಯಲ್ಲಿ ಪರಿಹಾಸ್ಯವಾಗಿ ಕಾಣುವುದು. ಒಂದು ವೇಳೆ ನಿನ್ನ ಬದಲು ನಾನು ಪ್ರಾಣ ಕಳೆದುಕೊಂಡೆನೆನ್ನು. ನಮ್ಮ ಸಮಾಜದಲ್ಲಿ ಹೆಂಗಸಿನ ಅವಮಾನ ಗಂಡಸಿಗಿಲ್ಲ. ಆ ಮೇಲೆ ಜನ ನನ್ನನ್ನು ಬೈದು ನಿನ್ನನ್ನು ಪುರಸ್ಕರಿಸುವರು. ಆಗ ನಿನಗೆ, ನಿನ್ನ ಮನೆ ಐಶ್ವರ್ಯ ಗೌರವ ಎಲ್ಲಾ ಮೊದಲಿನಂತೆಯೇ ಸಿಕ್ಕುವುದು. ನೀನಾದರೂ ಸುಖವಾಗಿರಬಹುದು.

ಮಾಧು—ಹುಚ್ಚಿ! ನಿನ್ನನ್ನು ಕಳೆದುಕೊಂಡಮೇಲೆ ನನಗೆ ಮನೆಯೇ, ಐಶ್ವರ್ಯವೇ, ಗೌರವವೇ? ನೀನೇ ನನ್ನ ಸರ್ವಸ್ವ. ಹೂ, ಈಗ ಆ ಮಾತಿನಿಂದ ಪ್ರಯೋಜನವಿಲ್ಲ. ಈಗ ಸ್ವಲ್ಪ ಹೊತ್ತಿನ ಮುಂಚೆ ನನಗಾದ ಅನುಭವದಿಂದ ನಾನು ಇನ್ನು ಬದುಕಿರುವುದಿಲ್ಲವೆಂದು ನಿರ್ಧರ ಮಾಡಿದ್ದೇನೆ. ಶ್ರೀಮಂತರ ಮಕ್ಕಳು ಪರಾವಲಂಬಿಗಳಾಗಿಯೇ ಬಾಳನ್ನು ನಡೆಸಬೇಕು. ಓದು ಕಲಿಯಬಹುದು. ನಮಗಿಂತ ಬಡಹುಡುಗರು ಇನ್ನೂ ಜಿನ್ನಾಗಿ ಓದು ಕಲಿಯುತ್ತಾರೆ. ನಮಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಪರೀಕ್ಷೆಯಾದ ಮೇಲೆ ಶಿಫಾರಸು ಬೇಕು. ಆದರಿಂದಲೇ ಅಧಿಕಾರ. ಸ್ವತಂತ್ರವಾಗಿ ಇತರರಂತೆ ಪ್ರಪಂಚದಲ್ಲಿ ಸಂಪಾದಿಸಿ ಜೀವನ ಸಮರದಲ್ಲಿ ಒದಗಿಬರುವ ಎಡರುತೊಡರುಗಳನ್ನು ಜಯಿಸುವ ಯೋಗ್ಯತೆ ನಮ್ಮಲ್ಲಿಲ್ಲ. ಅದಕ್ಕೆ ತಕ್ಕಹಾಗೆ ನಮ್ಮನ್ನು ಬೆಳೆಸುವು ದಿಲ್ಲ.

ಉಮಾ—ಅದೆಲ್ಲಾ ವಿಚಾರ ಬೇಡ, ಮಾಧು. ಮುಖ್ಯ ಈ ಪ್ರಪಂಚದಲ್ಲಿ ನಮ್ಮಂಥ ಪ್ರಣಯಿಗಳಿಗೆ ಸ್ಥಾನವಿಲ್ಲ. ನಿನ್ನ ಹಾಗೆ ನಾನೂ ಮನಸ್ಸನ್ನು ಗಟ್ಟಿಮಾಡಿಬಿಟ್ಟಿದ್ದೇನೆ. ಈ ಮನೆಯ ಯಜಮಾನಿ ತಿರುಗಿಬಂದು ಬಾಡಿಗೆ ಕೇಳುವ ಹೊತ್ತಿಗೆ ನಾನು ಸತ್ತು ಶವವಾಗಿ ಬಿಟ್ಟಿರ್ತೀನಿ ಸರಿ. ಇನ್ನು ಜೀವದಿಂದಿರೋಲಾರೆ.

ಮಾಧು—ಹಾಗಾದರೆ ಈ ಪೊಟ್ಟಣದಲ್ಲಿರುವ ಪುಡಿಯನ್ನು ಒಂದು ಲೋಟ ನೀರಿಗೆ ಸೇರಿಸಿ ಇಬ್ಬರೂ ಕುಡಿದುಬಿಡೋಣ.

ಉಮಾ—ಇದರಲ್ಲೇನಿದೆ ಮಾಧು?

ಮಾಧು—ವಿಷ.

ಉಮಾ—ಅದನ್ನು ಕೊಂಡುಕೊಂಡು ಬಂದೆಯಾ?

ಮಾಧು—ಹೂ. ಅದಕ್ಕೂ ಎಷ್ಟು ತಕರಾರು, ಆಡ್ಡಿ ಗೊತ್ತೆ. ಈ ಪ್ರಪಂಚದಲ್ಲಿ ನಮ್ಮ ಜೀವದ ಮೇಲೇ ನಮಗೆ ಹಕ್ಕಿಲ್ಲ. ಒಂದು ಜೀವ ಹೋಗುವಷ್ಟು ವಿಷ ಕೊಡಬೇಕಾದರೆ ಎಷ್ಟು ತನಿಕೆ ಮಾಡು ತ್ತಾನೆ ಗೊತ್ತೆ ಔಷಧಿ ಅಂಗಡಿಯವನು. ಕಡೆಗೂ ಅವನು ಕೊಡಲೇ ಇಲ್ಲ. ಆಮೇಲೆ ನನ್ನ ಸ್ನೇಹಿತ ಡಾಕ್ಟರ್ ಸೀತಾರಾಂ ಇಲ್ಲವೆ.ಅವನ ಬಳಿಗೆ ಹೋಗಿ ಏನೇನೋ ಸುಳ್ಳು ಹೇಳಿ ಇದನ್ನು ತಂದಿದ್ದಾಯಿತು.

ಉಮಾ—ಅವನು ತಕರಾರು ಮಾಡದೆ ಕೊಟ್ಟನೆ?

ಮಾಧು—ಮಾಡದೆ ಇರುತ್ತಾನೆ? ಏನೇನೋ ಪ್ರಶ್ನೆ ಕೇಳಿದ. ನನಗೆ ರೇಗಿತು. ಬೈದು ಬಿಟ್ಟೆ. ಕಡೆಗೂ ಅವನಿಗೆ ಅನುಮಾನವೇ. ಅಂತೂ ಪಟ್ಟಣ ಕಟ್ಟಕೊಟ್ಟ. ಕೊಡುವುದಕ್ಕೆ ಮುಂಚೆ ಒಂದು ಉಪನ್ಯಾಸ ವನ್ನೆ ಕೊಟ್ಟ. ಆತ್ಮಹತ್ಯೆ ಪಾಪಕರ, ಇತ್ಯಾದಿ. ಆದರೆ ನಮ್ಮ ಸಂಕಟ ಅವನಿಗೆ ಹೇಗೆ ಗೊತ್ತಾಗಬೇಕು? ಹೂ. ಹೋಗ್ಲು, ಒಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ಲೋಟ ನೀರನ್ನು ತೆಗೆದುಕೊಂಡು ಬಾ ಹೋಗು.

ಉಮಾ—ನಾನೇ ಬೆರೆಸಿ ತೆಗೆದುಕೊಂಡು ಬರುತ್ತೇನೆ, ಕೊಡು. (ತೆಗೆದು ಕೊಂಡು ಒಳಗೆ ಹೋಗುವಳು.)

ಮಾಧು—ಉಮಾ ! ನಾವು ಆವನ್ನು ಕುಡಿಯುವುದಕ್ಕೆ ಮುಂಚೆ ಒಂದು ಕಾಗದವಲ್ಲಿ ನಾವೇ ಆತ್ಮಹತ್ಯ ಮಾಡಿಕೊಂಡಿದ್ದೇವೆಂದು ಬರೆದಿಡಬೇಕು. ಇಲ್ಲದಿದ್ದರೆ ಬೇರೆ ಯಾರಿಗಾದರೂ ತೊಂದರೆ ಬಂದೀತು. ಅಲ್ಲವೆ ?

ಉಮಾ—(ಒಳಗಿಂದಲೇ) ಹೌದು. ಸತ್ತಮೇಲೂ ಶಿಕ್ಷಿಸಿಯಾರು ಬರೆದಿಡು. ರುಜು ಹಾಕೋಣ.

ಮಾಧು—(ಒಂದು ಪುಸ್ತಕದ ಮೇಲೆ ಒಂದು ಹಾಳೆಯನ್ನಿಟ್ಟುಕೊಂಡು ಮಾತು ಗಳನ್ನು ಗಟ್ಟಿಯಾಗಿ ಹೇಳಿಕೊಳ್ಳುತ್ತಾ ಬರೆಯುವನು.) "ನಮ್ಮಿಬ್ಬರ ಪ್ರೇಮ ಅಚಲವಾದುದು. ಆದರೆ ನಮ್ಮ ತಂದೆ ತಾಯಿಗಳು ನಮ್ಮ ಪ್ರೇಮದ ತೀವ್ರತೆಯನ್ನು ಅರಿತುಕೊಳ್ಳಲಾರದೆ ಹೋದರು. ಸಮಾಜ ನಮ್ಮನ್ನು ಜರೆಯಿತು. ನಮಗೆ ಜೀವನದಲ್ಲಿ ಜಿಗುಪ್ಸೆಯಾಗಿ ನಾವು ನಮ್ಮ ಖುದ್ದು ರಾಜಿಯಿಂದ ಆತ್ಮಹತ್ಯೆಯನ್ನು ಮಾಡಿಕೊಂಡಿದ್ದೇವೆ" ಕೇಳಿಸಿತೆ ಉಮಾ....?

ಉಮಾ—(ಒಳಗಿಂದಲೇ) ಹೂ. ಸರಿಯಾಗಿದೆ....

ಮಾಧು—(ವಿಕಾರವಾಗಿ ನಗುತ್ತಾ) ಕೇಳಿದೆಯಾ ಈ ಮಾತನ್ನು ... 'ಖುದ್ದು ರಾಜಿಯಿಂದ'... ಹ. ಹ. ಹ....ನ್ಯಾಯವಾಗಿ ಆದು 'ಸಮಾಜ ಶೃಂಖಲೆಗಳ ಬಲವಂತದಿಂದ'—ಎಂದಿರಬೇಕು ಅಲ್ಲವೆ ?

ಉಮಾ—(ಬಾಗಿಲ ಬಳಿ ತಲೆಹಾಕಿ) ಹೌದು. ಹಾಗೇ ಬರೆದರಾಯಿತು. ಸಾಯುವವರು ನಾವು ಎತಕ್ಕೆ ಹೆದರಿ ಸುಳ್ಳನ್ನು ಬರೆಯಬೇಕು ?

ಮಾಧು—ಹಾಗಲ್ಲ ಉಮಾ. ಖುದ್ದುರಾಜಿ ಎನ್ನುವುದು ನ್ಯಾಯಾಸ್ಥಾನದ ಪದ. ಇತರರನ್ನು ನ್ಯಾಯಾಸ್ಥಾನದ ಶಿಕ್ಷೆಯಿಂದ ಪಾರುಮಾಡ ಬೇಕಾದರೆ ಆ ಪದವನ್ನೇ ಉಪಯೋಗಿಸಬೇಕು. ಆದ್ದರಿಂದ ಅದೇ ಇರಲಿ ಬಿಡು.

ಉಮಾ—ಹಾಗಾದರೆ ಅದೇ ಇರಲಿ. ಇಷ್ಟು ಪುಡಿಯನ್ನೂ ಹಾಕಿಬಿಡಲೇ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಧು—ಹೂ ಹಾಕು. ಇಬ್ಬರಿಗೂ ಆಗಬೇಕು.

ಉಮಾ—(ಒಳಗೆ ಹೋಗಿ ಗಾಜಿನ ಲೋಟದಲ್ಲಿ ಪುಡಿಯನ್ನು ಕಲಕುತ್ತಾ ತರುವಳು) ಇಗೋ.

ಮಾಧು—ಮೊದಲು ಅದನ್ನು ಅಲ್ಲಿಡು. ಈ ಕಾಗದಕ್ಕೆ ನಾನು ರುಜುಮಾಡಿದ್ದೇನೆ. ನೀನೂ ರುಜು ಮಾಡು. (ಅವಳು ರುಜುಮಾಡುವಳು) ಮಾಡಿದೆಯೋ. ಸರಿ. ಅದನ್ನು ಚೆನ್ನಾಗಿ ಕಾಣುವ ಹಾಗೆ ಈ ಗೂಟಕ್ಕೆ ತಗಲಿಸೋಣ. (ಗೋಡೆಯಲ್ಲಿದ್ದ ಒಂದು ಮೊಳೆಗೆ ತಗುಲಿಸುವನು) ಇನ್ನು ದೇವರ ಮುಂದೆ ಕುಳಿತು ಪ್ರಾರ್ಥನೆ ಮಾಡೋಣ. (ಇಬ್ಬರೂ ದೇವರ ಪಟದ ಮುಂದೆ ಕುಳಿತು ನಮಸ್ಕರಿಸುವರು) ಇಗೋ, ಮಹಾತ್ಮಾಜಿಯವರ ಪಟ. ಅದರ ಮುಂದೆ ಕುಳಿತು ಪ್ರಾರ್ಥಿಸೋಣ. ಅವರ ಮರಂತ ಮರಣದಿಂದ ಅವರ ಅಮರವಾದ ತತ್ವಗಳು ಹೇಗೆ ಪ್ರಪಂಚದ ಗೌರವವನ್ನು ಪಡೆದವೋ ಹಾಗೆಯೇ ನಮ್ಮ ದುರಂತ ಮರಣದಿಂದ ಜನ ಎಚ್ಚೆತ್ತು ನಮ್ಮಂತಹ ಪ್ರಣಯಿಗಳ ಪ್ರೇಮಕ್ಕೆ ಗೌರವ ದೊರಕುವಂತೆ ಮಹಾತ್ಮರ ಆತ್ಮ ಅನುಗ್ರಹಿಸಲಿ... ಎಲ್ಲಿ ಆ ಲೋಟವನ್ನು ತೆಗೆದುಕೋ....ಇನ್ನೊಂದು ಲೋಟವನ್ನೂ ತಾ. (ಉಮಾ ಒಳಗಿನಿಂದ ಇನ್ನೊಂದು ಲೋಟವನ್ನು ತರುವಳು. ಅವಳು ದುಃಖದಿಂದ ಮಾತನಾಡಲಾರದವಳಾಗಿದ್ದಾಳೆ. ಕಣ್ಣಿಂದ ನೀರು ಸುರಿಯುತ್ತಿದೆ) ಉಮಾ! ಅಳಬೇಡ. ಧೈರ್ಯವಾಗಿ ಮೃತ್ಯುವನ್ನು ಎದುರಿಸೋಣ. ಇಗೋ, ಎರಡು ಲೋಟಗಳಿಗೂ ಅರ್ಧರ್ಧ ಹಾಕಿದ್ದೇನೆ.

ಉಮಾ—(ಮಾಧುವನ್ನು ಅಪ್ಪಿಕೊಂಡು ಉಕ್ಕಿಬರುವ ದುಃಖದಿಂದ ತಡವರಿಸಿ ಮಾತನಾಡುತ್ತಾ) ಜನ್ಮ ಜನ್ಮಗಳಲ್ಲಿಯೂ ನಾವಿಬ್ಬರೂ ಗಂಡಹೆಂಡಿರಾಗಿಯೇ ಹುಟ್ಟುವಂತೆ ದೇವರು ಅನುಗ್ರಹಿಸಲಿ....ಆ ಲೋಟವನ್ನು ಕೊಡು. (ಮಾಧು ಲೋಟವನ್ನು ಕೊಡುವನು) ಇಗೋ ಕುಡಿದು ಬಿಟ್ಟೆ (ಕುಡಿಯುವಳು).

ಮಾಧು—(ತಾನೂ ಕುಡಿದು) ನಾನೂ ಮುಗಿಸಿದೆ.

ಉಮಾ—ಈ ವಿಷ ಹೊಟ್ಟೆಯಲ್ಲಿ ಹೋಗುವಾಗ ಎಷ್ಟು ತಣ್ಣಗೆ ತಂಪಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಧು—ಹಾವಿನ ವಿಷ ಕ್ಷಣ ಮಾತ್ರದಲ್ಲಿ ಸಾಯಿಸುವುದಾದರೂ ಹಾವನ್ನು ಮುಟ್ಟುವರೆ ತಣ್ಣಗೆ ಮುಂಜಿನ ಹಾಗೆ ಕೊರೆಯುತ್ತಿರುತ್ತದಂತೆ. ವಿಷವೆಲ್ಲಾ ಅದೇ ಬಗೆಯೇ ಇರಬೇಕು..... ..... ಆ ಲೋಟವನ್ನು ತೊಳೆದುಬಿಡು. ಯಾರಿಗೂ ಯಾವ ವಿಷವೆಂದು ಗೊತ್ತಾಗದಿರಲಿ.

ಉಮಾ—ಲೋಟವನ್ನು ತೊಳೆದು ಒಂದು ಮೂಲೆಯಲ್ಲಿ ಬೋರಲು ಹಾಕುವಳು. ಹಾಸಿಗೆಯ ಸುರುಳಿಯ ಮೇಲೆ ಕುಳಿತುಕೊಂಡು, ಹೊಟ್ಟೆಯನ್ನು ಹಿಸುಕಿಕೊಳ್ಳುತ್ತಾ) ನನಗೇನೋ ಹೊಟ್ಟೆಯಲ್ಲಿ ಹೇಗೇಗೋ ಆಗುತ್ತಿದೆ.

ಮಾಧು—ವಿಷ ತನ್ನ ಕೆಲಸವನ್ನು ಶುರು ಮಾಡಿರಬಹುದು....ನನಗೂನೂ ಹೊಟ್ಟೆಯಲ್ಲಿ ಕಸಿವಿಸಿಯಾಗುವ ಹಾಗಿದೆ.

ಉಮಾ—ಈಗ ನನಗೂ ಹಾಗೇ ಆಗುತ್ತಿದೆ.

[ಅಷ್ಟು ಹೊತ್ತಿಗೆ ತೆರೆಯಲ್ಲಿ 'ಮಾಧವರಾವ್, ಸಾರ್, ಮಾಧವರಾವ್, ಪೋಸ್ಟ್‌ಮ್ಯಾನ್ ಸಾರ್' ಎಂಬ ಕೂಗು ಕೇಳುವುದು]

ಮಾಧು—ಪೋಸ್ಟ್‌ಮ್ಯಾನ್ ಅಂತೆ ಈಗ. ಈ ಹಾಳು ಜನ ಸಾಯೋವಾಗಲೂ ತೊಂದರೆ ಕೊಡದೆ ಬಿಡರು. (ಎದ್ದು ಬಾಗಿಲು ತೆಗೆಯುವನು. ಪ್ರವೇಶಿಸಿದ ಪೋಸ್ಟ್‌ಮ್ಯಾನನ್ನು ಕಂಡು ಚೇಸರದಿಂದ) ಏನಯ್ಯಾ ಅದು ?

ಪೋಸ್ಟ್‌ಮ್ಯಾನ್—ಟೆಲಿಗ್ರಾಂ ಸಾರ್. (ಮುಂದೆ ಹಿಡಿದು) ರುಜುಮಾಡಿ ಸಾರ್.

ಮಾಧು—ಈಗೇನು ಟೆಲಿಗ್ರಾಂ ಹಾಳಾದ್ದು. (ರುಜು ಮಾಡಿಕೊಡುತ್ತಾ) ತೊಗೋ, ರುಜುಮಾಡಿದ್ದೇನೆ.

ಪೋಸ್ಟ್‌ಮ್ಯಾನ್—(ತೆಗೆದುಕೊಂಡು) ಇನ್ನೊಂದು ಟೆಲಿಗ್ರಾಂ ಮನಿಯಾರ್ಡರಿದೆ ಸಾರ್. ಅದು ಉಮಾದೇವಿಯವರಿಗೆ—ನೂರು ರೂಪಾಯಿ.

ಉಮಾ—(ತಟ್ಟನೆದ್ದು) ನನಗೇ ?

ಪೋಸ್ಟ್‌ಮ್ಯಾನ್—ಹೌದು ತಾಯಿ. ತಗೊಳ್ಳಿ. ರುಜುಮಾಡಿ. (ರುಜು ಮಾಡುವಳು.) ಇಗೋ, ಒಂದು ನೂರು ರೂಪಾಯಿನ ನೋಟು—

Sri Vidyabharathi Book Centre, Sringeri

CC-O. In Public Domain. Digitized by eGangotri

ತಗೊಳ್ಳಿ–(ಕೊಡುವನು) ನಮಸ್ಕಾರ–(ಹೋಗುವನು.)

[ಉಮಾ ಮಾಧುರವರು ದಿಗ್ಭ್ರಾಂತರಾಗಿ ತಮ್ಮನ್ನು ತಾವು ನಂಬದೆ ಕ್ಷಣಕಾಲ ಮೌನವಾಗಿರುವರು]

ಉಮಾ—(ಚೇತರಿಸಿಕೊಂಡು) ಏನು ಟಿಲಿಗ್ರಾಂ ಅದು? ಯಾರಿಂದ?

ಮಾಧು—(ಓದುತ್ತಾ) ಅಪ್ಪ ಅಮ್ಮ ಇಬ್ಬರೂ ಕೊಟ್ಟಿದ್ದಾರೆ. (ಓದಿಕೊಂಡು) ಅಯ್ಯೋ! ಏನನಾಹುತವಾಗಿ ಹೋಯ್ತು. ಈ ಹಾಳು ಟಿಲಿಗ್ರಾಂ ಒಂದು ಕ್ಷಣ ಮುಂಚೆ ಬರಬಾರದಾಗಿತ್ತೆ. ಅಯ್ಯೋ! ಏನು ಮಾಡೋದೆ ಈಗ? ಏನು ಮಾಡೋದೆ?

ಉಮಾ—ಏನು ಮಾಧು? ಏನಂತ ಟಿಲಿಗ್ರಾಂ ಮಾಡಿದ್ದಾರೆ?

ಮಾಧು—ಬದುಕಬೇಕು, ಮೊದಲು ಬ ದು ಕ ಬೇ ಕು ಈಗ. ಏನು ಮಾಡೋಣ? ಅಪ್ಪನಿಗೆ ಕಾಯಿಲೆಯಂತೆ. ನಮ್ಮನ್ನು ಕ್ಷಮಿಸಿದ್ದಾನಂತೆ. ನಾವು ಮದುವೆಯಾಗಬಹುದಂತೆ. ನಿಮ್ಮ ತಂದೆತಾಯಿಗಳೂ ಇದಕ್ಕೆ ಒಪ್ಪಿದ್ದಾರಂತೆ. ನಿಮ್ಮ ತಂದೆತಾಯಿಗಳೂ ಸೇರಿ ಆ ಟಿಲಿಗ್ರಾಂ ಕೊಟ್ಟಿದ್ದಾರೆ, ನೂರು ರೂಪಾಯಿ ಕಳಿಸಿದ್ದಾರೆ.

ಉಮಾ—(ನೂರು ರೂಪಾಯಿ ನೋಟನ್ನು ಕೆಳಗೆ ಬಿಸಾಡಿ, ನಿರಾಶೆಯಿಂದ) ಕಾಲ ಮಿಂಚಿದ ಮೇಲೆ ಒಪ್ಪಿದರೇನು ಬಿಟ್ಟರೇನು.

ಮಾಧು—ಹಾಗನ್ನೋಕಾಗುತ್ತೇನೇ? ಬದುಕಬೇಕು, ಬದುಕಬೇಕು, ವಿಷ ತೆಗೆದುಕೊಂಡವರಿಗೆ ಏನು ಔಷಧಿ ಕೊಡುತ್ತಾರೆ ಅಂತ ವಿಚಾರಿಸು. ಬೇಗ ಒಂದು ಗಾಡಿಗಾದರೂ ಹೇಳಿ ಕಳುಹಿಸು. ಡಾಕ್ಟರ ಷಾಪಿಗಾದರೂ ಹೋಗೋಣ.

ಉಮಾ—ಎಲ್ಲಿ ಹೋಗಲಿ ಮಾಧು ನಾನು. ನಿನ್ನ ಹಾಗೆ ನಾನೂ ವಿಷ ತೆಗೆದುಕೊಂಡಿದ್ದೇನೆ. ಹೊಟ್ಟೆಯಲ್ಲಿ ಹೇಗೆ ಹೇಗೋ ಆಗುತ್ತಿದೆ.

ಮಾಧು—(ರೇಗಿ) ನಾನು ಬದಕೋದು ನಿನಗೆ ಇಷ್ಟವಿಲ್ಲವೇನೆ?

ಉಮಾ—ಹಾಗೆ ಹೇಳಬಹುದೆ ಮಾಧು?

ಮಾಧು—(ರೇಗುತ್ತಾ ಗಟ್ಟಿಯಾಗಿ) ಹೂ, ಹೋಗು. ಗಾಡಿಯವನನ್ನಾದರೂ ಕೂಗು ಮತ್ತೆ.

ಉಮಾ—ಕೂಗುತ್ತೇನೆ. (ಎಂದು ಏಳುವರಷ್ಟರಲ್ಲಿ ಮನೆಯ ಯಜಮಾನಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರವೇಶಿಸುವಳು.)

ಮನೆಯ ಯಜಮಾನಿ—ಉಮಾ! ಏನಮ್ಮ ಅದು ಗಲಾಟೆ?

ಉಮಾ—ಬಂದಿರಾ ಬನ್ನಿ. ಇಲ್ಲಿ ನೋಡಿ, ನಾವಿಬ್ಬರೂ ಜೀವನವಲ್ಲಿ ಬೇಸತ್ತು ವಿಷ ಕುಡಿದುಬಿಟ್ಟಿದ್ದೇವೆ.

ಮನೆಯ ಯಜಮಾನಿ—ಅಯ್ಯೋ! ಹುಡುಗು ಸಹವಾಸವೇ, ಏನು ಬಂದಿತ್ರೆ ಅಂಥಾದ್ದು.

ಉಮಾ—ಏನೋ ಎತ್ತೋ ಅದೆಲ್ಲಾರಾ ಹೋಗಲಿ. ಈಗ ಮೊದಲು ಹೇಳಿ. ಏನಾದರೂ ಅದಕ್ಕೆ ಔಷಧಿ ಹೇಳಿ, ಒಂದು ಗಾಡಿ ಮಾಡಿಕೊಡಿ. ಷಾಪಿಗಾದರೂ ಹೋಗುತ್ತೇವೆ.

ಮನೆಯ ಯಜಮಾನಿ—ಮೊದಲು ವಾಂತಿಯಾದರೆ ಅರ್ಧ ಆದರ ತೊಂದರೆ ಕಡಿಮೆಯಾಗುತ್ತೆ. ಉಪ್ಪು ಕಲಸಿ ಕುಡಿಯಿರಿ. ಸಾಸುವೆ ಅರೆದು ಕುಡಿದರೂ ಒಳ್ಳೆಯದು. ತಾಳಿ, ಉಪ್ಪು ಕಲಸಿ ತರುತ್ತೇನೆ. (ಒಳಗೆ ಹೋಗುವಳು.)

ಮಾಧು—ಕ್ಷಮಿಸು, ಉಮಾ. ಬದುಕಬೇಕು ಎನ್ನುವ ಆತುರದಲ್ಲಿ ಏನೇನೋ ಮಾತನಾಡಿದೆ. ನೀನೂ ವಿಷ ತೆಗೆದುಕೊಂಡಿರುವುದನ್ನೇ ಮರೆತುಬಿಟ್ಟೆ.

ಉಮಾ—ಬಿಡು ಮಾಧೂ. ಒಂದು ಮಾತು ಆಡಿದರೇನು. ಸತ್ಯ, ನೀನು ಬದುಕಿದರೆ ಸಾಕು.

ಮಾಧು—ನಾನು ಮಾತ್ರ ಅಲ್ಲ. ಇಬ್ಬರೂ ಬದುಕಬೇಕು.

ಮನೆಯ ಯಜಮಾನಿ—(ಬಂದು) ಯಾರು ವಿಷ ತೆಗೆದುಕೊಂಡಿದ್ದೀರೋ ಹಿಡಿಯಿರಿ.

ಉಮಾ—ಇಬ್ಬರೂ.

ಮನೆಯ ಯಜಮಾನಿ—ಇಬ್ಬರೂ... ಶುದ್ಧ ಹುಡುಗು, ಶುದ್ಧ ಹುಡುಗು. ತೊಗೊಳ್ಳಿ, ನೊದಲು ಕುಡಿಯಿರಿ. (ಇಬ್ಬರೂ ಕುಡಿಯುವರು)

ಉಮಾ—ಇದು ಉಪ್ಪಿನ ನೀರೇ?

ಮನೆಯ ಯಜಮಾನಿ—ಹೌದು. (ಇಬ್ಬರೂ ಕುಡಿಯುವರು)

ಉಮಾ—ಸರಿ. ಇಬ್ಬರೂ ಕುಡಿದದ್ದಾಯಿತು. ಅದೇನೋ ಸಾಸುವೆ ಅರೆದು ಕುಡಿದರೆ ಒಳ್ಳೆಯದು ಅಂತ ಹೇಳಿದಿರಲ್ಲ. ಅದನ್ನೂ ಮಾಡಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊಂಡು ಬಂದುಬಿಡಿ. ಇದರ ಮೇಲೆ ದೇವರ ಮನಸ್ಸಿಗೆ ಬಂದ ಹಾಗಾಗಲಿ.

ಮಾಧು—ಒಂದು ಗಾಡಿ ಮಾಡಿಕೊಂಡು ಬನ್ನಿ. ಷಾಪಿಗೆ ಹೋಗುತ್ತೇವೆ. ದಯವಿಟ್ಟು ಬೇಗನೆ ತರಿಸಿ.

ಮನೆಯ ಯಜಮಾನಿ—ಹಾಗೇ ಆಗಲಿ. (ಒಳಗೆ ಹೋಗುವಳು).

ಉಮಾ—ಷಾಪಿಗೆ ಹೋದರೆ ಏನು ವಿಷ ತೆಗೆದುಕೊಂಡೆವೆಂದು ಹೇಳ ಬೇಡವೆ, ಸರಿಯಾದ ಚಿಕಿತ್ಸೆ ಮಾಡೋಕೆ. ನಿನಗೆ ಅದರ ಹೆಸರು ತಿಳಿಯದೆ?

ಮಾಧು—ಉಹು. ಅದನ್ನು ನನಗವನು ಹೇಳಲಿಲ್ಲ. ತಪ್ಪದೆ ಪ್ರಾಣ ತೆಗೆಯುವ ವಿಷ ಅಂದೆ. ತಂದು ಕೊಟ್ಟ. ಇಷ್ಟಕ್ಕೂ ಬೇರೆ ಷಾಪಿಗೆ ಹೋದರೆ ತಾನೇ ಆ ಮಾತು. ಆ ವಿಷ ತಂದ ಷಾಪಿಗೇ ಹೋಗಬೇಕು. ಏನು ಕೊಟ್ಟನೆಂದು ಅವನಿಗೆ ಗೊತ್ತೇ ಇರುತ್ತದೆ.

ಉಮಾ—ಅವನು ಸ್ನೇಹಿತನೆಂದು ಹೇಳುತ್ತಿ. ದೊಡ್ಡ ಉಪನ್ಯಾಸವನ್ನೇ ಕೊಟ್ಟನೆಂದು ಹೇಳಿದಿ. ಇಂಥಾದ್ದರಲ್ಲಿ ಆಲ್ಲಿಗೇ ಹೋದರೆ ಅವನು ಹಾಸ್ಯಮಾಡದೆ ಇದ್ದಾನೇ?

ಮಾಧು—ಹಾಸ್ಯವಲ್ಲ, ಏನಾದರೂ ಮಾಡಲಿ. ಈಗ ಆ ಷಾಪು ಬಿಟ್ಟರೆ ನಮಗೆ ಬೇರೆ ಗತಿಯೇ ಇಲ್ಲ. ಅಲ್ಲದೆ ಬೇರೆ ಷಾಪಿಗೆ ಹೋಗುವುದು ಸಾಧ್ಯವೂ ಇಲ್ಲ. ಬೇರೆ ಷಾಪಿಗೆ ಹೋದರೆ, ಏನಾಗುತ್ತದೆ ಗೊತ್ತೆ? ವಾಸಿಯಾಗದಿದ್ದರಂತೂ ಕತೆಯೇ ಮುಗಿಯಿತು, ವಾಸಿಯಾದರೂ ಸೆರೆಮನೆ ಸೇರಬೇಕಾಗುತ್ತದೆ, ಆಷ್ಟೆ.

ಉಮಾ—ಸೆರೆಮನೆ; ಆದೇಕೆ?

ಮಾಧು—ಆತ್ಮಹತ್ಯೆಗೆ ಪ್ರಯತ್ನಿಸಿದೆವು ಅಂತ ಆ ಡಾಕ್ಟರೇನಾದರೂ ಪೋಲೀಸಿಗೆ ತಿಳಿಸಿದರೆ ಮುಗಿಯಿತು. ಆ ತಪ್ಪಿಗೆ ಕೋರ್ಟು, ಕಛೇರಿ, ಶಿಕ್ಷೆ, ಸೆರೆಮನೆ ಇತ್ಯಾದಿ....ಆದರೂ ನೀನು ಹೇಳಿದ ಹಾಗೆ ಆದೇನು ಪುಡಿ ಅಂತ ತಿಳಿದಿದ್ದರೆ ಒಳ್ಳೆಯದು. ಆ ಡಾಕ್ಟರು ಸಿಗದಿದ್ದರೆ ಆಗ ಬೇರೆ ಡಾಕ್ಟರಿಂದಲಾದರೂ ಬೇಗ ಚಿಕಿತ್ಸೆ ನಡೆಸಿಕೊಳ್ಳಲು ಸಹಾಯವಾಗುತ್ತೆ. ಏನೋ ಕೈತಪ್ಪಿನಿಂದ ಯಾವುದೋ ಪುಡಿ

Sri Vidyabharathi Book Centre, Sringeri

CC-O. In Public Domain. Digitized by eGangotri

ತೆಗೆದುಕೊಳ್ಳೋದರ ಬದಲು ಇದನ್ನು ತೆಗೆದುಕೊಂಡೆವು ಅಂತ ಕತೆ ಹೇಳಬಹುದು. ಚಿಕಿತ್ಸೆ ಆಗಲಿ. ಆಮೇಲೆ ನೋಡಿಕೊಳ್ಳೋಣ.

ಉಮಾ—ಅದು ಸರಿ. ಆದರೆ ಆ ಪುಡಿ ಎಲ್ಲವನ್ನೂ ಹಾಕಿಬಿಟ್ಟಿನಲ್ಲಾ.... ಅಯ್ಯೋ! ಸಂಕಟ, ಹೊಟ್ಟೆಯಲ್ಲೆಲ್ಲಾ ಏನೋ ಕಸವಿಸಿಯಾಗುತ್ತಿದೆ.

ಮಾಧು—ಎಲ್ಲಿ, ಆ ಲೋಟ ಈ ಕಡೆ ತಾ.

ಉಮಾ—(ಲೋಟ ತಂದುಕೊಟ್ಟು) ಇದರಲ್ಲೇನಿದೆ. ಯಾರಿಗೂ ಗೊತ್ತಾಗ ಬಾರದೆಂದು ಲೋಟವನ್ನು ತೊಳೆದಿಡಲಿಲ್ಲವೆ?

ಮಾಧು—(ಲೋಟವನ್ನು ತಿರುಗಿಸಿ ನೋಡಿ) ಹೌದು. ಇದರಲ್ಲೇನೂ ಒಂದು ಚೂರೂ ಇಲ್ಲ. ಏನು ಮಾಡುವುದು?... (ಸ್ವಲ್ಪ ಯೋಚಿಸಿ) ಒಳಗೆಹೋಗಿ ಆ ಪುಡಿ ಕಟ್ಟಿದ್ದ ಕಾಗದವನ್ನು ತಾ. ಅದಕ್ಕೆ ಅಲ್ಪ ಸ್ವಲ್ಪ ಧೂಳಾದರೂ ಹತ್ತಿರುತ್ತದಲ್ಲ. ಅದನ್ನಾದರೂ ತೆಗೆದು ಕೊಂಡು ಹೋಗೋಣ.

ಉಮಾ—(ಒಳಗಿನಿಂದ ತಂದುಕೊಡುತ್ತ) ಇಗೋ. ಇದಕ್ಕೆ ಧೂಳೇನೋ ಮೆತ್ತಿದೆ. ಇದನ್ನೇ ತೆಗೆದುಕೊಂಡು ಹೋಗೋಣ.

ಮಾಧು—(ಹುಷಾರಾಗಿ ಕಾಗದವನ್ನು ಕೈಲಿ ಹಿಡಿದುಕೊಂಡು ನೋಡುವನು) ಸ್ವಲ್ಪ ಧೂಳೇನೋ ಹತ್ತಿದೆ, ಪರವಾಯಿಲ್ಲ. (ಆ ಚೂರುಕಾಗದದಲ್ಲಿ ಬರೆದಿರುವುದೇನನ್ನೋ ಓದುತ್ತಾ ಆವನ ಮುಖ ಪ್ರಫುಲ್ಲವಾಗುವುದು. ಸಂತೋಷಾಧಿಕ್ಯದಿಂದ ಝುಗ್ಗನೆದ್ದು ಬಂದು ಉಮೆಯ ಎರಡು ಭುಜಗಳನ್ನೂ ಎರಡು ಕೈಗಳಿಂದ ಹಿಡಿದುಕೊಂಡು ಒತ್ತುತ್ತಾ) ಉಮಾ! ಉಮಾ! ನೀನು ಬದುಕಿದೆ, ಬದುಕಿದೆ, ಬದುಕಿದೆ.

ಉಮಾ—(ಉತ್ಸಾಹದಿಂದ) ನೀನು?

ಮಾಧು—ನಾನೂ ಬದುಕಿದೆ, ಬದುಕಿದೆ, ಬದುಕಿದೇ. (ಸಂತೋಷದಿಂದ ಭರದಲ್ಲಿ ಅವನು ಅವಳ ಭುಜಗಳನ್ನು ಒತ್ತುವನು. ಆವಳಿಗೆ ನೋವಾಗುವುದು).

ಉಮಾ—(ನೋವಿನಿಂದ) ಅಬ್ಬ! (ಅವನ ಹಿಡಿತದಿಂದ ಬಿಡಿಸಿಕೊಂಡು) ಏನಿದು ಹುಚ್ಚು?

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಧು—ಹುಚ್ಚಲ್ಲ, ಉಮಾ. ನಿಜ. ಬದುಕಿದೆವು ಅಂದೆ.

ಉಮಾ—ಬದುಕಿದೆವು ಅಂದರೆ ಹೇಗೆ? ಅದೇನು ಹೇಳು.

ಮಾಧು—(ಕಾಗದವನ್ನು ತೋರಿಸುತ್ತಾ) ಇವರಲ್ಲಿದ್ದ ಪುಡಿಯನ್ನು ಲೋಟಕ್ಕೆ ಹಾಕಿದೆಯಲ್ಲಾ ಇವರಲ್ಲಿ ಏನು ಬರೆದಿದೆ ಎನ್ನುವುದನ್ನು ಓದಲಿಲ್ಲವೆ?

ಉಮಾ—ಓದಲಿಲ್ಲ. ಆ ಅಡಿಗೆ ಮನೆಯಲ್ಲಿ ಕತ್ತಲು. ಜೊತೆಗೆ ನನ್ನ ಕಣ್ಣು ನೀರಿನಿಂದ ತುಂಬಿತ್ತು.

ಮಾಧು—ಹೋಗಲಿ ಬಿಡು. ಈಗ ಓದು ಏನು ಬರೆದಿದೆ ಅಂತ.

ಉಮಾ—(ಓದುತ್ತಾ) "ಮಿತ್ರ ಮಾಧು, ಡಾಕ್ಟರ್ ವೃತ್ತಿ ಸಾಯಿಸುವುದಲ್ಲ ಬದುಕಿಸುವುದು ಮಾತ್ರ." "ಜೀವನವನ್ನು ತಾಳಿ ಬದುಕಿದ್ದರೆ ಅತಿಶಯಗಳನ್ನು ಕಾಣಬಹುದು." ಎಂಬ ಗಾದೆಯ ಮಾತನ್ನು ನೆನಪಿಗೆ ತಂದುಕೋ. ಈ ಔಷಧಿಯಿಂದ ಹೊಟ್ಟೆಯಲ್ಲಿ ಕಸವಿಸಿ ಯಾಗಬಹುದು, ಅಷ್ಟೆ. ಆ ಕಸವಿಸಿ ತೀರುವ ಹೊತ್ತಿಗೆ ದೇವರು ನಿನಗೆ ಸುಖ ಸಂಪದಗಳ ದಾರಿ ತೋರಲೆಂದು ಹಾರೈಸುತ್ತೇನೆ. ನಿನ್ನ ಮಿತ್ರ ಡಾಕ್ಟರ್ ಸೀತರಾಂ....ಅಂದರೆ....ಅಂದರೆ ?

ಮಾಧು—ಅದು ವಿಷವಲ್ಲ ಅಂತ ಅರ್ಥ.

ಉಮಾ—(ಸಂಬಲಾರದೆ) ಅಲ್ಲವೆ? ವಿಷವಲ್ಲವೆ ?

ಮಾಧು—ಉಹು: ಅಲ್ಲ ಉಮಾ, ಅಲ್ಲ. ದೇವರು ಬದುಕಿಸಿದ. ನಿನ್ನ ಅದೃಷ್ಟ ಒಳ್ಳೆಯದು.

ಉಮಾ—ನಿನ್ನದೂ ಒಳ್ಳೆಯದೇ....ಮಾಧು....ಮೊದಲು ಹೋಗಿ ಆ ನಿನ್ನ ಡಾಕ್ಟರಿಗೆ ವಂದನೆಗಳನ್ನರ್ಪಿಸಬೇಕು. ಏನು ಅದೃಷ್ಟ.

ಮನೆಯ ಯಜಮಾನಿ—(ಪ್ರವೇಶಿಸಿ) ಇಗೋ! ಸಾಸುವೆಯನ್ನು ಅರೆದು ತಂದಿದ್ದೇನೆ. (ಅವಳ ಮಾತನ್ನು ಕೇಳಿ ಮಾಧು ಉಮಾ ಇಬ್ಬರೂ ನಗುವರು. ಅವರ ನಗುವನ್ನು ಕಂಡು ಅರ್ಥವಾಗದೆ) ಇದೇನು ಇಬ್ಬರೂ ಹೀಗೆ ನಗುತ್ತಿದ್ದೀರಿ? ವಿಷದ ಆಮಲೇನಾದರೂ ಏರಿದೆಯೋ ಹೇಗೆ ?

ಮಾಧು—ಕ್ಷಮಿಸಿ. ನಾವು ನಿಮಗೆ ತುಂಬಾ ತೊಂದರೆ ಕೊಟ್ಟೆವು. ನಾವು ತೆಗೆದುಕೊಂಡದ್ದು ವಿಷವಲ್ಲ. ಇನ್ನು ನಿಮ್ಮ ಸಾಸುವೇನೂ ಬೇಡ,

Sri Vidyabharathi Book Centre, Sringeri

CC-O. In Public Domain. Digitized by eGangotri

ಗಾಡಿನೂ ಬೇಡ.

ಮನೆಯ ಯಜಮಾನಿ—ವಿಷವಲ್ಲ, ವಿಷವಲ್ಲವೆ ? ಬರೀ ಸುಳ್ಳು ಹೇಳಿ ಉಪ್ಪು ನೀರು ಕುಡಿದಿರಾ? ಒಳ್ಳೆ ಹುಡುಗು ಸಹವಾಸವಾಯಿತು.

ಮೂಢು—ಅದಕ್ಕೇ ಹೊಟ್ಟೆಯಲ್ಲಿ ಕಸವಿಸಿಯಾಗುತ್ತಿದೆ. ದೂಕಳಿಸಿ ಬರುವ ಹಾಗಿದೆ.

ಉಮಾ—ಕೋಪ ಮಾಡಿಕೊಳ್ಳಬೇಡಿ. ಎಲ್ಲವನ್ನೂ ನಿಧಾನವಾಗಿ ಹೇಳುತ್ತೇನೆ. ನಾವು ವಿಷ ಅಂತಲೇ ಕುಡಿದೆವು. ಆದರೆ ಆ ಡಾಕ್ಟರು ವಿಷದ ಬದಲು ಇನ್ನೇನೋ ಪುಡಿಯನ್ನು ಕೊಟ್ಟುಬಿಟ್ಟಿದ್ದ, ಅಷ್ಟೆ. ಅದು ಈಗ ಗೊತ್ತಾಯಿತು.

ಮನೆಯ ಯಜಮಾನಿ—ಆದೆಲ್ಲಾರಾ ಹೋಗಲಿ. ಮೂರು ತಿಂಗಳ ಬಾಡಿಗೆ ಎಲ್ಲಿ?

ಮೂಢು—ಇಗೋ ತೊಗೊಳ್ಳಿ.ನಮ್ಮ ತಂದೆಯವರಿಂದ ಟೆಲಿಗ್ರಾಂ ಬಂದಿದೆ. ಈಗ ಎಲ್ಲಾ ಅನುಕೂಲವಾಗಿದೆ. ದುಡ್ಡೂ ಬಂದಿದೆ. ಇನ್ನೂ ಒಂದು ತಿಂಗಳ ಬಾಡಿಗೆ ಹೆಚ್ಚಾಗಿಯೇ ಕೊಡುತ್ತೇವೆ. ಚಿಲ್ಲರೆ ಇಲ್ಲ. ಈ ನೂರು ರೂಪಾಯಿಯ ನೋಟನ್ನು ತೆಗೆದುಕೊಳ್ಳಿ. ಬಾಕಿ ಚಿಲ್ಲರೆ ತಂದುಕೊಡಿ.

ಮನೆಯ ಯಜಮಾನಿ—ನಿಜವಾಗಲು? ನೀವು ಎಷ್ಟು ಒಳ್ಳೆಯ ಹುಡುಗರು !

ಮೂಢು—ತಾವು ಇಷ್ಟು ದಿನ ಸುದಾರಿಸಿದ್ದಕ್ಕೆ ಅದು ಇನಾಮು. ನಾವು ಈಗಲೇ ಊರಿಗೆ ಹೊರಡಬೇಕು. ಬೇಗನೆ ಚಿಲ್ಲರೆ ತಂದುಕೊಡಿ.

ಮನೆಯ ಯಜಮಾನಿ—ಸಧ್ಯ ದೇವರು ನಿಮ್ಮಿಬ್ಬರಿಗೂ ಬೇಗನೆ ಮದುವೆ ಯಾಗುವಂತೆ ಅನುಗ್ರಹಿಸಿದರೆ

ಉಮಾ—ಅದೂ ಗೊತ್ತಾಗಿದೆ. ನಾವು ಊರಿಗೆ ಹೋಗುತ್ತಲೂ ಮದುವೆಯೇ. ನಮ್ಮ ನಮ್ಮ ತಂದೆತಾಯಿಗಳೂ ಒಪ್ಪಿದ್ದಾರೆಂದು ಟೆಲಿಗ್ರಾಂ ಬಂದಿದೆ.

ಮನೆಯ ಯಜಮಾನಿ—ಸಧ್ಯ. ದೇವರು ದೊಡ್ಡವನು. ಎಲ್ಲಾರಾ ಸುಖವಾಗಿರಿ.

ಉಮಾ—ಎಲ್ಲಾ ನಿಮ್ಮ ಆಶೀರ್ವಾದ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಧು—(ನ್ಯಂಗ್ಯವಾಗಿ) ಆಹಾ! ನಿಮ್ಮ ಆಶೀರ್ವಾದ.

ಮನೆಯ ಯಜಮಾನಿ—ದೇವರ ಆ ಶೀ ವಾ ದ. ಆಗಲಿ ಬರುತ್ತೇನೆ.

(ಹೋಗುವಳು)

[ಮಾಧು ಉನೂ—ಇಬ್ಬರೂ ಗಟ್ಟಿಯಾಗಿ ಬಿದ್ದು ಬಿದ್ದು ನಗುತ್ತಿರುವ ಹಾಗೆ ತೆರೆ.]

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಕೈವಾರ ರಾಜಾರಾಯರ ನಾಟಕಗಳನ್ನು ಕುರಿತು....

"ನಿಮ್ಮ ಅನೇಕ ನಾಟಕಗಳನ್ನು ಓದಿ ಸಂತೋಷ ಪಟ್ಟಿದ್ದೇನೆ. ಅವು ಪುಟ್ಟ ಪುಟ್ಟದಾಗಿವ್ವರೂ ಒಂದಕ್ಕಿಂತ ಒಂದು ಚನ್ನಾಗಿದೆ ; ಇಂದು ನಮ್ಮ ಸಂಸಾರ ಗಳಲ್ಲಿ ಕಂಡುಬರುವ ಹಲವು ಸಮಸ್ಯೆಗಳನ್ನು ರಸವತ್ತಾಗಿ ಚಿತ್ರಿಸುತ್ತವೆ. ಈ ಚಿತ್ರಗಳಲ್ಲಿ ನಮ್ಮ ದೋಷ ದೌರ್ಬಲ್ಯಗಳನ್ನು ನೋಡಿ ಮನಸ್ಸು ಕಹಿ ಯಾಗುವುದಕ್ಕೆ ಬದಲು ನಾವು ವಿನೋದಗೊಂಡು ನಕ್ಕು ನಲಿಯುತ್ತೇವೆ. ಅವುಗಳಿಂದ ಪರಿಹಾಸ್ಯ ಪರಿಹಾರ ಎರಡೂ ದೊರೆಯುವುದು ಒಂದು ವೈಶಿಷ್ಟ್ಯ. ಸೋತುಹೋದರೇ ಸಂಸಾರದಲ್ಲಿ ಸುಖ. ಇದನ್ನು ನೀವು ಬರಿಯ ತತ್ತ್ವವಾಗಿ ಉಪದೇಶಿಸದೆ ಉದಾಹರಣೆಗಳಿಂದ ಪ್ರತಿಪಾದಿಸಿದ್ದೀರಿ. ಪಾತ್ರಗಳು ನಿತ್ಯವೂ ನಾವು ನಮ್ಮ ಸುತ್ತ ಮುತ್ತ ಕಾಣುವವು. ಸಂಭಾಷಣೆ ಆಡುವ ರೂಢಿಮಾತುಗಳಿಂದಲೂ ಸಣ್ಣ ಸಣ್ಣ ವಾಕ್ಯಗಳಿಂದಲೂ ರಚಿತ ವಾಗಿದೆ; ಆದ್ದರಿಂದ ಜೀವಂತವಾಗಿ ಸ್ವಾಭಾವಿಕವಾಗಿದೆ. ಅಶ್ಲೀಲವಿಲ್ಲ, ಕೃತಕತೆಯಿಲ್ಲ. ಇವು ಪ್ರಸಿದ್ಧ ಫ್ರೆಂಚ್ ನಾಟಕಕಾರನಾದ ಮೋಲಿಯರನ ಕೃತಿಗಳನ್ನು ಜ್ಞಾಪಕಕ್ಕೆ ತರುತ್ತದೆ. ಇವುಗಳನ್ನು ಓದಿದರೆ ನಮ್ಮ ಜನದ ಮೂರ್ಖತೆ ಮೌಢ್ಯಗಳೂ ಓರೆಕೋರೆಗಳೂ ಸ್ವಲ್ಪವಾದರೂ ಕಡಮೆ ಯಾಗುತ್ತವೆಂದು ನಾನು ತಿಳಿಯುತ್ತೇನೆ."

ಪ್ರೊ|| ಎ. ಆರ್. ಕೃಷ್ಣಶಾಸ್ತ್ರೀ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಕೈವಾರ ರಾಜಾರಾವ್ ಅವರ ಜನಪ್ರಿಯ ನಾಟಕಗಳು

ಬುಡುಬುಡಿಕೆ
ಪತ್ರ ಪ್ರಮಾದ
ಗಳಿಸುವ ಗೃಹಿಣಿ
ವಧು ಪರೀಕ್ಷೆ
ಗಂಡನ ಜುಲ್ಮಾನೆ
ಪ್ರೇಮ ಪರೀಕ್ಷೆ
ಹುಡುಗು ಸಹವಾಸ
ಬೇಸ್ತು
ಯಾರ ಪ್ರೀತಿ ಹೆಚ್ಚು ?
ನಾಟಕಕಾರನ ವಿಚಾರಣೆ
ನಿರಾಶ್ರಿತರ ಹುಡುಗಿ
ನೆಹರು ಬಂದ ದಿನ
ಸಂಸಾರ ಸತ್ಯಾಗ್ರಹ ಅಥವಾ
ಹೆಂಗಸರ ಬಂಡಾಯ

ಅಮ್ಮಯ್ಯನ ಆಟಂಬಾಂಬ್
ಪ್ರಮೀಳೆಯ ಪಾರ್ಲಿಮೆಂಟ್
ವಾಸಂತಿಯ ತಂತ್ರ
ಸಿಂಧೀ ಡ್ರೆಸ್
ಮೋಹಿನಿ
ಅಪವಾದ
ಸಾದಕನ ಸೇಡು
ಒಂದು ದುರಂತ
ಜುಲೇಖ
ನವ ಚದುರಂಗ
ಹಸ್ಬೆಂಡ್ಸ್ ಸಪ್ಲೈಡ್ ಅಥವಾ
ಗಂಡನಿಗಾಗಿ ಗುದ್ದಾಟ
ಅಪ್-ಟು-ಡೇಟ್ ಅಮ್ಮಯ್ಯ

ಡಿ.ವಿ.ಕೆ. ಮೂರ್ತಿ ಪ್ರಕಾಶಕರು, ಶೃಂಗೇರಿ, ಮೈಸೂರು ಜಿ
CC-O. Vidyabharathi Foundation Trust, Sringeri